## ***ಭಾರತೀಯ ಸಮಾಜದ ಲಕ್ಷಣಗಳು***
## ***Features of Indian Society***

■ ***ಪೀಠಿಕೆ : -***

ಭಾರತೀಯ ಸಂಸ್ಕೃತಿ ಅತಿ ಪುರಾತನವಾದದ್ದು. ವಿಶ್ವದ ಎಲ್ಲಾ ದೇಶಗಳಿಗೆ ಭಾರತವು ಗುರುವಿನ ಸ್ಥಾನದಲ್ಲಿದೆ. ನಮ್ಮ ಭಾರತದ ಸಮಾಜವು ವೈವಿಧ್ಯತೆ, ವಿಶಾಲತೆ, ನಿತ್ಯ ವಿನೂತನ ಆಗಿದೆ. ಭಾರತೀಯ ಸಂಸ್ಕೃತಿಯು ಜನಪ್ರಿಯ ಆಚಾರ-ವಿಚಾರಗಳನ್ನು ಒಳಗೊಂಡಿರುವುದಾಗಿದೆ. ಆದ್ದರಿಂದ ನಮ್ಮ ದೇಶವನ್ನು **ವೈವಿಧ್ಯತೆಯ ಪುಟ್ಟ ಪ್ರಪಂಚ** ಎಂದು ಕರೆದಿರುವರು

ಭಾರತದ ದೇಶದ ಚರಿತ್ರೆಯನ್ನು ಅವಲೋಕನ ಮಾಡಿದಾಗ ತಿಳಿದುಬರುವ ಅಂಶವೇನೆಂದರೆ ನಮ್ಮ ದೇಶವನ್ನು **ಭರತವರ್ಷ, ಜಂಬುದ್ವೀಪ, ಅರ್ಯಾವರ್ತ, ಅಜನಾಭವವರ್ಷ, ಹಿಂದುಸ್ಥಾನ, ಭರತ ಖಂಡ, ಇಂಡಿಯಾ** ಮುಂತಾದ ಹೆಸರುಗಳಿಂದ ಕರೆದಿರುವುದನ್ನು ಕಾಣುತ್ತೇವೆ.

ಭಾರತೀಯ ಸಂಸ್ಕೃತಿಯಲ್ಲಿ ಉದಾರತೆ, ನಿರ್ಮಲ ಜ್ಞಾನ ಮತ್ತು ಸೌಂದರ್ಯವನ್ನು ಬೀರುವ ಸಂಸ್ಕೃತಿಯನ್ನು ಕಾಣಬಹುದು. ಭಾರತೀಯ ಸಂಸ್ಕೃತಿಯೆಂದರೆ ಕರ್ಮ ಭಕ್ತಿ ಹಾಗೂ ಧ್ಯಾನಗಳ ಸಂಗಮವಾಗಿದೆ. ಅಸಂಖ್ಯಾತ ಜಾತಿ, ಮತ, ಪಂಥ , ಪ್ರದೇಶ ,ಭಾಷೆ, ಸಂಸ್ಕಾರ ಮತ್ತು ಸಂಸ್ಕೃತಿಗಳನ್ನು ಹೊಂದಿರುವ ನಮ್ಮ ದೇಶವು ಕೇವಲ ಗಾತ್ರದಲ್ಲಿ ಮಾತ್ರ ದೂಡ್ಡದಾಗಿರದೆ ಸಾಂಸ್ಕೃತಿಕ ಪರಂಪರೆಯಲ್ಲಿಯೂ ಸತ್ವಯುತ ಮತ್ತು ಶಕ್ತಿಶಾಲಿ ಆಗಿರುವುದನ್ನು ಕಾಣುತ್ತೇವೆ. ಭಾರತೀಯರು ಭೌತ ಸಂಪತ್ತಿಗಿಂತಲೂ ಅಲೌಕಿಕ ವಿಚಾರಗಳಿಗೆ ಮಹತ್ವ ಕೊಟ್ಟಿರುವರು.

ಶಂಕರಾಚಾರ್ಯರು, ರಾಮಾನುಜರು ,ಮಧ್ವರು ,ಬಸವೇಶ್ವರರು, ಕನಕದಾಸರು, ಪುರಂದರದಾಸರು, ತುಕಾರಾಮ, ಪುಲೆ,ಜನಿಸಿದ ಪವಿತ್ರ ನೆಲೆ ನಮ್ಮ ಭಾರತ. ಭಾರತೀಯ ಸಂಸ್ಕೃತಿಯೆಂದರೆ ಕರ್ಮ ಭಕ್ತಿ ಹಾಗೂ ಜ್ಞಾನಗಳ ಸಂಗಮವಾಗಿದೆ. ಸಾಂಸ್ಕೃತಿಕ ಏಕತೆ ಪರಂಪರೆ ಭಾರತೀಯರ ಜನಜೀವನದಲ್ಲಿ ಎದ್ದು ಕಾಣುತ್ತದೆ. ಭಾಷೆ, ಜನಾಂಗ, ಜಾತಿ ಮುಂತಾದ ವೈವಿಧ್ಯಮಯ ಅಂಶಗಳಿಂದ ಕೂಡಿರುವ ಭಾರತ ಸಾಂಸ್ಕೃತಿಕವಾಗಿ ಒಂದೇ ತರಹದ ಸಾಧ್ಯತೆಯನ್ನು ಕಾಣಬಹುದು. ಹಬ್ಬ-ಹರಿದಿನಗಳ ಆಚರಣೆ, ಪದ್ಧತಿಗಳು, ವಿವಾಹ, ಕುಟುಂಬದ ಬಗೆಗಿನ ಪವಿತ್ರ ಭಾವನೆ, ಮಾತೃಭೂಮಿ, ಕರ್ಮಭೂಮಿ, ಪುಣ್ಯಭೂಮಿ, ಭಾರತಾಂಬೆ, ಮುಂತಾದವುಗಳ ಬಗ್ಗೆ ಶ್ರದ್ಧೆ, ಗೌರವ, ಆದರ, ಸದ್ಭಾವನೆಗಳ ಸಮಾನ ರೂಪವನ್ನು ಭಾರತೀಯ ಸಾಂಸ್ಕೃತಿಕ ಪರಂಪರೆಯ ಪ್ರತೀಕವೆಂದು ಹೇಳಬಹುದು.

ಹಿಂದೂ ,ಮುಸ್ಲಿಂ ,ಕ್ರೈಸ್ತ, ಜೈನ, ಬೌದ್ಧ ಮತ್ತು ಸಿಖ್ ಮುಂತಾದ ಧರ್ಮಗಳೆಲ್ಲವೂ ಭಾರತದಲ್ಲಿ ಕಾಣಬಹುದು. ಭಾರತದಲ್ಲಿ ವೇದಗಳು, ಉಪನಿಷತ್ತುಗಳು, ಭಗವದ್ಗೀತೆಗಳು, ಪುರಾಣಗಳು, ರಾಮಾಯಣ, ಮಹಾಭಾರತ ಮುಂತಾದ ಪವಿತ್ರಗ್ರಂಥಗಳನ್ನು ಪವಿತ್ರ ಭಾವನೆಯಿಂದ ವಾಚನ ಮಾಡಲಾಗುತ್ತದೆ. ಭಾರತದಲ್ಲಿ ಏಕದೇವೋಪಾಸನೆ, ದೇವನೊಬ್ಬ ನಾಮ ಹಲವು, ಪುನರ್ಜನ್ಮ, ಕರ್ಮಫಲ, ನಿರ್ಮಾಣ,ಮೋಕ್ಷ , ಮುಂತಾದ ಭಾವನೆಗಳು ಸರ್ವಧರ್ಮ ಮತ್ತು ಪಂಥಗಳಲ್ಲಿ ಮನೆಮಾಡಿವೆ. ಇಲ್ಲಿ ಸರ್ವ ಧರ್ಮಗಳ ಸಾರ ಒಂದೇ ಆಗಿದೆ. ಭಾರತೀಯ ಸಮಾಜವು ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿರುವುದು ಜಗತ್ತಿನಲ್ಲಿಯ ರಾಷ್ಟ್ರಗಳಿಗೆ ವಿಸ್ಮಯಕಾರಿಯಾಗಿದೆ. ಈ ರೀತಿ ಬಿನ್ನತೆಯ ನಡುವೆ ಏಕತೆ ಇರುವುದು ನಮ್ಮ ಭಾರತೀಯ ಸಮಾಜದ ವೈಶಿಷ್ಟತೆ.

**ಭಾರತೀಯ ಸಮಾಜದ ಗುಣಲಕ್ಷಣಗಳು**
**Characteristics of Indian Culture**

**I. ವೈವಿಧ್ಯತೆಯಲ್ಲಿ ಏಕತೆ *( Unity in Diversity)***

*ಜಾತಿ-ಮತ, ಧರ್ಮ, ಪಂಥ, ಜನಾಂಗ,ಪ್ರದೇಶ, ಭಾಷೆ, ಸಂಸ್ಕೃತಿ, ಪದ್ಧತಿ, ರೂಢಿಗಳು,ಪರಂಪರೆಗಳು, ಮುಂತಾದವುಗಳಲ್ಲಿ ವೈವಿಧ್ಯತೆಗಳು ಕಂಡುಬಂದರೂ ಸಹಿತ **ವೈವಿಧ್ಯತೆಯಲ್ಲಿ ಏಕತೆ** ನಮ್ಮ ಸಂಸ್ಕೃತಿಯ ಮಹತ್ವದ ಲಕ್ಷಣವಾಗಿದೆ. ನಮ್ಮ ಭಾರತ ದೇಶವು ಭೌಗೋಳಿಕ,ಸಾಂಸ್ಕೃತಿಕ,ಸಾಮಾಜಿಕ, ಧಾರ್ಮಿಕವಾಗಿ, ತನ್ನದೇ ಆದ ವಿಶಿಷ್ಟತೆಯನ್ನು ಕಾಪಾಡಿಕೊಂಡು ಬಂದಿದೆ. ಆದ್ದರಿಂದ ಭಾರತವನ್ನು ಜಗತ್ತಿನ **ಸೂಕ್ಷ್ಮ ರೂಪ** ಎಂದು ಕರೆಯಲಾಗಿದೆ. ಇಲ್ಲಿ ಕಂಡುಬರುವ ವೈವಿಧ್ಯತೆ ಮತ್ತು ಏಕತೆ ಭಾರತವನ್ನು **ವೈವಿಧ್ಯತೆಗಳ ಆಗರ**ವೆಂದೇ ಕರೆಯಲಾಗಿದೆ. ಸಾಂಸ್ಕೃತಿಕ ಭಿನ್ನತೆ, ಹಾಗೂ ಸಾಂಸ್ಕೃತಿಕ ಏಕರೂಪತೆಗಳೆರಡು ಏಕಕಾಲದಲ್ಲಿ ಕಂಡುಬರುವಂತಹ ವಿಶೇಷವಾದ ಸಾಮಾಜಿಕ ವ್ಯವಸ್ಥೆ ಭಾರತದ್ದಾಗಿದೆ.*

■ ***ವೈವಿಧ್ಯತೆಯ ಅಂಶಗಳು** : --*

. ಭಾರತವು ಅನೇಕ ಅಂಶಗಳಲ್ಲಿ ತನ್ನದೇ ಆದ ವೈವಿಧ್ಯತೆಯನ್ನು ಕಂಡುಕೊಂಡಿದೆ. ಅವು ಮುಂದಿನಂತಿವೆ.

**1. ಭೌಗೋಳಿಕ ವೈವಿಧ್ಯತೆ ( Geographical Diversity)**

ಭಾರತದಲ್ಲಿ ಒಂದೇ ತೆರನಾದ ಹವಾಗುಣ, ಭೂಮೇಲ್ಮೈ ಲಕ್ಷಣಗಳನ್ನು ಪಡೆದುಕೊಂಡಿಲ್ಲ. ಭಾರತವು ಭೌಗೋಳಿಕವಾಗಿ ಅನೇಕ ವ್ಯತ್ಯಾಸಗಳನ್ನು ಹೊಂದಿದೆ. ಅಂದರೆ ಹಿಮಪರ್ವತ ಶ್ರೇಣಿಗಳಿವೆ. ವಿಂಧ್ಯ - ಅರಾವಳಿ - ಸಹ್ಯಾದ್ರಿ ಮೊದಲಾದ ಪರ್ವತಗಳನ್ನು ಒಳಗೊಂಡ ದಟ್ಟವಾದ ಅರಣ್ಯ ಪ್ರದೇಶಗಳಿವೆ. ಪೂರ್ವ - ಪಶ್ಚಿಮ - ದಕ್ಷಿಣಕ್ಕೂ ಸಮುದ್ರತೀರ ಗಳಿವೆ. ಇಲ್ಲಿ ಹೆಚ್ಚು ಮಳೆ ಬೀಳುವ ಪ್ರದೇಶಗಳಿವೆ. ಉದಾ , ಚಿರಾಪುಂಜಿ. ಅದರಂತೆ ಕಡಿಮೆ ಮಳೆ ಬೀಳುವ ಪ್ರದೇಶಗಳು, ಕ್ಷಾಮಕ್ಕೆ ಈಡಾಗುವಂತಹ ಪ್ರದೇಶಗಳು ಇವೆ. ಕೆಲವಡೆ ಥಾರನಂತಹ ಮರುಭೂಮಿಯು ಕಂಡುಬರುವುದು. ಅಲ್ಲದೆ ವಿವಿಧ ಬಗೆಯ ವಾಯುಗುಣ (ಉಷ್ಣ -ಶೀತ- ಸಮಶೀತೂಷ್ಣ) ಗಳನ್ನು ಭಾರತ ಹೊಂದಿ ತನ್ನ ಭೌಗೋಳಿಕ ವೈವಿಧ್ಯತೆಯಿಂದ ಮೆರೆದಿದೆ.

**2. ಜನಾಂಗೀಯ ವೈವಿಧ್ಯತೆ (Racial Diversity)**

ಜನಾಂಗೀಯ ದೃಷ್ಟಿಕೋನದಿಂದ ಅಧ್ಯಯನ ಮಾಡಿದಾಗ ಭಾರತದಲ್ಲಿ ಹಲವಾರು ಬುಡಕಟ್ಟುಗಳಿಗೆ ಸೇರಿದ ಜನರಿದ್ದಾರೆ. ಅವರನ್ನು ಭಾರತದ ಮೂಲನಿವಾಸಿಗಳು ಎಂದು ಕರೆಯಲ್ಪಡುವ ಆರ್ಯರು ಮತ್ತು ದ್ರಾವಿಡರೂ ಇದ್ದಾರೆ. ಹೀಗೆ ಭಾರತದಲ್ಲಿ ವಿವಿಧ ಜನಾಂಗಗಳ ಜೊತೆಗೆ ಗ್ರೀಕರು, ಶಕರು, ಕುಶಾನರು, ಹೂಣರು, ಮಂಗೋಲರು, ಅರಬ್ಬರು, ಮೊಘಲರು, ಮುಂತಾದ ಜನಾಂಗಗಳೂಡನೆ ಸಮ್ಮಿಲನ ಕಾಣುತ್ತೆವೆ. ಈ ಜನಾಂಗೀಯ ವೈವಿಧ್ಯತೆ ಭಾರತೀಯರಲ್ಲಿ ಭ್ರಾತೃತ್ವ ಪ್ರೇಮವನ್ನು ಹೆಚ್ಚಿಸಿದೆ.

**3. ಬುಡಕಟ್ಟು ವೈವಿಧ್ಯತೆ (Tribal Diversity)**

ನಾಗರಿಕತೆಯಿಂದ ಬಹುದೂರ ಉಳಿದಿರುವ ಜನಾಂಗ ಇನ್ನೂ ಭಾರತದಲ್ಲಿದೆ. ಅವರು ಗುಡ್ಡ - ಬೆಟ್ಟ - ನಿರ್ಜನ ಪ್ರದೇಶದಲ್ಲಿ ವಾಸವಾಗಿದ್ದಾರೆ. ಅದೇ ಬುಡಕಟ್ಟು ಜನಾಂಗ ವಿಶಾಲವಾದ ಭಾರತದಲ್ಲಿ ಎಲ್ಲ ಕಡೆಗಳಲ್ಲಿಯೂ ಕಂಡು ಬರುತ್ತಾರೆ. ದೇಶದ ಜನಸಂಖ್ಯೆಯ **ಶೇ. 7.8 ( 52.03 ದ.ಲಕ್ಷ )** ಕ್ಕೂ ಅಧಿಕ ಸಂಖ್ಯೆ ಇವರದ್ದಾಗಿದೆ. ಆದಿವಾಸಿಗಳಿಗೆ ತಮ್ಮದೆಯಾದ ಜೀವನ ವಿಧಾನ, ಪರಂಪರೆ, ಪದ್ಧತಿಗಳಿವೆ, ಅವರದೇ ಆದ ಧರ್ಮಾಚರಣೆ, ಭಾಷೆ , ನಂಬಿಕೆ, ನೆಲೆಗಳಿವೆ. ಇವರನ್ನು ಹಲವಾರು ಹೆಸರುಗಳಿಂದ ಗುರುತಿಸಲಾಗಿದೆ. ಅಲ್ಲದೆ ಅವರು ವಾಸಿಸುವ ಬೇರೆಬೇರೆಯಾದ ನೆಲೆಗಳಿಗೂ ಒಂದೂಂದು ಹೆಸರುಗಳಿವೆ. ಉದಾ : ಸಂತಾಲ, ಭಿಲ್, ಬೈಗಾ, ಗೊಂಡ, ಮುಂಡ, ಖಾಸಿ, ಗಾರೋ, ಬಡಗ, ಉರಾಳಿ, ತೋಡಾ, ಮುಂತಾದವುಗಳು. 1991 ರಲ್ಲಿಯೇ ಸುಮಾರು 527 ಆದಿವಾಸಿ ಸಮೂಹಗಳು ಇದ್ದವು ಎಂದು ಸಂವಿಧಾನದ 8ನೇ ಶೆಡ್ಯೂಲ್ ನಲ್ಲಿ ಉಲ್ಲೇಖಿಸಲಾಗಿದೆ. ಬಿಹಾರ್, ಗುಜರಾತ್, ಮಧ್ಯಪ್ರದೇಶ ,ಮಹಾರಾಷ್ಟ್ರ ,ಈ ಐದು ರಾಜ್ಯಗಳಲ್ಲಿ ಶೇ. 33 %ರಷ್ಟು ಬುಡಕಟ್ಟು ಜನರು ನೆಲೆಸಿರುವುದು ತಿಳಿದುಬರುತ್ತದೆ.ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಮೇಘಾಲಯ, ತ್ರಿಪುರ,ಮಿಜೋರಾಮ ಐದು ರಾಜ್ಯಗಳಲ್ಲಿ ಶೇ. 70 ರಿಂದ 95 ರಷ್ಟು ಬುಡಕಟ್ಟು ಜನರಿದ್ದಾರೆ. ದೇಶದ ತುಂಬೆಲ್ಲ ಕಂಡುಬರುವ ಬುಡಕಟ್ಟು ಜನಾಂಗಗಳ ಭಾಷೆ - ಪರಂಪರೆ - ಹೆಸರು - ಪದ್ಧತಿ ಎಲ್ಲಾ ಅಂಶಗಳಲ್ಲಿ ವೈವಿಧ್ಯತೆ ಕಂಡು ಬರುತ್ತದೆ.

### 4. ಧಾರ್ಮಿಕ ವೈವಿಧ್ಯತೆ ( Religious Diversity )

ಭಾರತದಲ್ಲಿ ಧಾರ್ಮಿಕ ವೈವಿಧ್ಯತೆಯು ವಿಶಿಷ್ಟ ಅಂಶವಾಗಿ ಕಂಡುಬರುತ್ತದೆ. ಹಿಂದೂ ಧರ್ಮಕ್ಕೆ ಭಾರತವಿದು ತವರೂರು, ಜನ್ಮಭೂಮಿ, ಎಂದು ಹೇಳಲಾಗುತ್ತದೆ. ಹಿಂದೂ ಧರ್ಮಕ್ಕೆ ಜನ್ಮನೀಡಿದ ಭಾರತ, ಅದರಂತೆ ಜೈನ - ಬೌದ್ಧ - ಸೀಖ ಧರ್ಮಗಳಿಗೂ ಜನ್ಮ ನೀಡಿತು. ಎಲ್ಲ ಧರ್ಮಗಳಿಗೆ ತನ್ನದೆ ಆದ ಧಾರ್ಮಿಕ ಆಚಾರ-ವಿಚಾರ, ವಿಧಿ - ವಿಧಾನಗಳು, ಪದ್ಧತಿಗಳಲ್ಲಿಯೂ ವೈವಿಧ್ಯತೆಯಿದೆ. ಆದರೂ ಸಮರತೆಯ ಬದುಕು ಅವರಲ್ಲಿದೆ. ಅಲ್ಲದೆ ಭಾರತದಲ್ಲಿ ಕ್ರಿಶ್ಚಿಯನ್ - ಮುಸ್ಲಿಂ ಧರ್ಮದ ಜನರೂ ಇಲ್ಲಿದ್ದಾರೆ.ಅವರು ಸಹ ಭಾರತೀಯರೊಂದಿಗೆ ಸಮರಸದಿಂದ ಜೀವಿಸುತ್ತಿದ್ದಾರೆ. ಹೀಗೆ ಭಾರತದಲ್ಲಿ ಬಹುಸಂಖ್ಯಾತ ಭಾರತೀಯರು ಹಿಂದೂಗಳಾಗಿದ್ದರೂ ಸಹಿತ ಇತರರನ್ನು ಗೌರವ ಮತ್ತು ಅಭಿಮಾನಿಗಳಿಂದ ಕಾಣುವ ಸಮ್ಯಕ್ ದೃಷ್ಟಿ , ಸಮನ್ವಯ ಭಾವದಿಂದ ಬದುಕುತ್ತಿರುವುದನ್ನು ನಮ್ಮ ದೇಶದಲ್ಲಿ ಕಾಣುತ್ತೇವೆ. ಹೀಗೆ ಭಾರತದಲ್ಲಿ ಯಾವುದೇ ಜಾತಿ - ಧರ್ಮ - ಮತ - ಪಂಥಗಳನ್ನದೆ ಜಾತ್ರೆ-ಉತ್ಸವಗಳಲ್ಲಿ ಅನ್ಯಧರ್ಮೀಯರ ಜೊತೆಗೆ ಉತ್ಸಾಹದಿಂದ ಪಾಲ್ಗೊಳ್ಳುತ್ತಾರೆ.

### 5. ಜಾತಿ ವೈವಿಧ್ಯತೆ ( Cast Diversity )

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ **ಜಾತಿ**ಗೆ ತನ್ನದೇ ಆದ ಪ್ರಮುಖ ಸ್ಥಾನವಿದೆ. ವಿವಿಧ ಜಾತಿ ಮತ್ತು ಉಪಜಾತಿಗಳ ಜನರು ನಮ್ಮ ದೇಶದಲ್ಲಿದ್ದಾರೆ. ಮೇಲ್ಜಾತಿ-ಕೆಳಜಾತಿ, ಸ್ಪೃಶ್ಯ-ಅಸ್ಪೃಶ್ಯ , ಹಿಂದುಳಿದವರು, ಮುಂದುವರೆದರು, ತಾರತಮ್ಯಗಳು ನಮ್ಮಲ್ಲಿ ಕಂಡುಬರುತ್ತವೆ. ಪ್ರಾಚೀನ ವೇದಗಳ ಕಾಲದಲ್ಲಿದ್ದ ನಾಲ್ಕು ವರ್ಣಗಳು ಇಂದು ಸುಮಾರು ನಾಲ್ಕುನೂರು ಜಾತಿ ಉಪಜಾತಿಗಳಾಗಿ ಮಾರ್ಪಟ್ಟಿವೆ. ಎಲ್ಲ ಜಾತಿ - ಉಪಜಾತಿಗಳು, ವಿಧಿ - ವಿಧಾನ - ಆಚರಣೆಗಳಲ್ಲಿ ವೈವಿಧ್ಯತೆ ಇದೆ. ಸಾಮಾಜಿಕ ಸಂಪರ್ಕದ ಮೇಲೆ ನಿರ್ಬಂಧನೆಗಳಿವೆ. ಅಸ್ಪೃಶ್ಯತಾ ಆಚರಣೆ ಇದೆ. ಪ್ರತಿಯೊಂದು ಜಾತಿ ಉಪಜಾತಿಗಳಲ್ಲಿ ವೈವಿಧ್ಯಪೂರ್ಣ ನಂಬಿಕೆಗಳಿವೆ. ಹೆಸರುಗಳಿವೆ. ದೇವತಾರಾಧನೆ, ಉದ್ಯೋಗಗಳಲ್ಲಿ, ಭಿನ್ನತೆಗಳಿದ್ದರೂ ನಮ್ಮ ದೇಶ ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿದೆ.

### 6 ಭಾಷಾ ವೈವಿಧ್ಯತೆ ( Linguistic Diversity )

ಭಾಷೆಯ ದೃಷ್ಟಿಯಿಂದಲೂ ನಮ್ಮ ದೇಶದಲ್ಲಿ ಅನಂತತೆಯನ್ನು ಸ್ಪಷ್ಟವಾಗಿ ಕಾಣುತ್ತೇವೆ. ಭಾರತೀಯ ಸಂವಿಧಾನವು 18 ಪ್ರಮುಖ ಭಾಷೆಗಳಿಗೆ ಮಾನ್ನಣೆ ನೀಡಿದ್ದರೂ, 1652 ಭಾಷೆಗಳನ್ನಾಡುವ ಜನರು ನಮ್ಮ ದೇಶದಲ್ಲಿದ್ದಾರೆ. ಹಿಂದಿ - ಇಂಗ್ಲಿಷ್ ಇವುಗಳನ್ನು ರಾಷ್ಟ್ರೀಯ ಆಡಳಿತ ಭಾಷೆಗಳೆಂದು ಒಪ್ಪಿಕೊಳ್ಳಲಾಗಿದೆ. ಹಾಗೂ ಪ್ರತಿಯೊಂದು ರಾಜ್ಯಗಳು ತಮ್ಮದೇ ಆದ ರಾಜ್ಯ ಭಾಷೆಯನ್ನು, ಆಡಳಿತ ಭಾಷೆಯನ್ನಾಗಿ ಅಳವಡಿಸಿಕೊಳ್ಳಲು ನಿರ್ದೇಶನ ನೀಡಿದೆ. ಪ್ರತಿಯೊಂದು ರಾಜ್ಯಕ್ಕೂ ತನ್ನದೇ ಆದ ಪ್ರಾದೇಶಿಕ ಭಾಷೆ ಎಂಬುದೊಂದಿದೆ. ಭಾರತದ ಆದಿವಾಸಿ ಜನಾಂಗಗಳಿಗೂ ತಮ್ಮದೇ ಆದ ಭಾಷೆ ಇದೆ. ಭಾಷೆ ಇತರರಿಗೆ ಅರ್ಥವಾಗದೆ ಇರುವುದರಿಂದ ಅಸಂಖ್ಯಾತ ಆದಿವಾಸಿ ಜನಾಂಗಗಳ ಅಸಂಖ್ಯಾತ ಭಾಷೆಗಳು ನಾಗರಿಕ ಜನರಿಗೆ ಇನ್ನೂ ದೂರವಾಗಿವೆ.

### 7. ಸಾಮಾಜಿಕ - ರಾಜಕೀಯ ವೈವಿಧ್ಯತೆ ( Socio - Political Diversity )

ಸಾಮಾಜಿಕ ವೈವಿಧ್ಯತೆಯು ಭಾರತದಲ್ಲಿ ಕಂಡುಬರುತ್ತದೆ. ಧರ್ಮ ಜಾತಿಗಳು ತನ್ನದೇಆದ ಆಚಾರ - ವಿಚಾರಗಳು , ಕ್ರಿಯಾವಿಧಿಗಳು, ರೂಡಿಗಳು , ಪರಂಪರೆಗಳು, ಪದ್ಧತಿಗಳು, ಮೌಲ್ಯಗಳಿವೆ. ಇವು ಒಂದು ಸಮುದಾಯದಿಂದ ಇನ್ನೊಂದು ಸಮುದಾಯಕ್ಕೆ ಭಿನ್ನವಾಗಿವೆ. ಇವೆಲ್ಲವುಗಳ ಜೊತೆಗೆ ಉಡುಗೆ-ತೊಡುಗೆ, ವೇಷ - ಭೂಷಣ, ಹವ್ಯಾಸಗಳು, ಒಬ್ಬರಂತೆ ಇನ್ನೊಬ್ಬರದಿಲ್ಲ . ಹೀಗೆ ಸಾಮಾಜಿಕ ವೈವಿಧ್ಯತೆ ಭಾರತದಲ್ಲಿ ಇಂದಿಗೂ ಕಂಡುಬರುವ ಒಂದು ಪ್ರಮುಖ ಅಂಶವಾಗಿದೆ.

ಹೀಗೆ ಭಾರತದಲ್ಲಿ ಧಾರ್ಮಿಕ ಜನಾಂಗೀಯ ಭಾಷೆ, ಜಾತಿ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ವೈವಿಧ್ಯತೆ, ಕಂಡು ಬಂದರೂ ಈ ಎಲ್ಲ ಅಂಶಗಳಲ್ಲಿ ಒಗ್ಗೂಡುವಿಕೆ, ಸಹಿಷ್ಣತೆ, ವಿನಿಮಯ, ಉದಾರತೆ, ವೈಚಾರಿಕತೆ, ಶಾಂತಿ-ಸಾಮರಸ್ಯ ,ಅಹಿಂಸಾ ತತ್ವ ಮುಂತಾದವುಗಳನ್ನು ಆಧರಿಸಿರುವುದರಿಂದ ತತ್ವವನ್ನು ಉಳಿಸಿಕೊಂಡು ಪ್ರಪಂಚಕ್ಕೆ ಮಾದರಿಯಾಗಿ ವೈವಿಧ್ಯತೆಯನ್ನು ಉಳಿಸಿಕೊಂಡು ಅವ್ಯಾಹತವಾಗಿ ಮುಂದುವರಿಸುತ್ತಿರುವುದು ಸಾಗಿ ಬರುತ್ತದೆ.

## II. ಧರ್ಮ ( Religion)

ಭಾರತದಲ್ಲಿ ಧರ್ಮವು ಜೀವನದ ಒಂದು ಕೇಂದ್ರಬಿಂದುವಾಗಿದೆ. ಭರತಖಂಡದಲ್ಲಿ ಜನಿಸಿದ ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ಧರ್ಮ- ಮತ - ಪಂಥಗಳಿಗೆ ಸಂಬಂಧಪಟ್ಟವನಾಗಿರುತ್ತಾನೆ. ಧರ್ಮದ ಚೌಕಟ್ಟನ್ನು ಹೊಂದಿರುವ ವ್ಯಕ್ತಿ ನಮ್ಮಲ್ಲಿ ಕಂಡುಬರುವನು. ಜನ್ಮವು ಒಬ್ಬ ವ್ಯಕ್ತಿಯ ಜಾತಿ-ಧರ್ಮವನ್ನು ನಿರ್ಧರಿಸುತ್ತದೆ. ಇದನ್ನು ಅರ್ಜಿತ ಅಥವಾ ಅನುವಂಶಿಕ ಸ್ಥಾನಮಾನ ಎಂದು ಕರೆಯಬಹುದಾಗಿದೆ. ಒಬ್ಬ ವ್ಯಕ್ತಿ ಜೀವನಪರ್ಯಂತ ತನ್ನ ಧರ್ಮದ ಆಚಾರ-ವಿಚಾರ, ವಿಧಿ - ವಿಧಾನ , ನೀತಿ - ನಿಯಮಗಳಿಗೆ ಬದ್ಧನಾಗಿರುತ್ತಾನೆ. ಧಾರ್ಮಿಕ ನಿಯಮಗಳನ್ನು ಉಲ್ಲಂಘಿಸಿ ಬದುಕಲು ಮನಸ್ಸು ಮಾಡಲಾರನು. ಒಂದು ವೇಳೆ ಹೀಗೆ ಮಾಡಿದರೆ ತಪ್ಪಿತಸ್ಥ ಪ್ರಜ್ಞೆ ಆತನಿಗೆ ಕಾಡುತ್ತದೆ.ಢ

"**ಭಾರತೀಯರ ಜೀವನದಲ್ಲಿ ಧರ್ಮವೇ ಕೇಂದ್ರ ಬಿಂದು, ಮತ್ತು ಜೀವಾಳ, ಧರ್ಮವೊಂದೇ ಭರತಖಂಡದ ಪ್ರಾಣ, ಅದಿಲ್ಲದೆ ನಾಶವಾಗುವುದು**" ಎಂದು **ಸ್ವಾಮಿ ವಿವೇಕಾನಂದರು** ತಿಳಿಸಿರುವರು.

" **ಹಿಂದೂ ಧರ್ಮ ಮತ್ತು ತತ್ವಜ್ಞಾನಗಳ ಸಂದೇಶ ಬಲದಿಂದಾಗಿ ಭಾರತವು ತನ್ನ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಮೆರೆದಿದೆ**" ಎಂದು **ಡಾಕ್ಟರ್ ರಾಧಾಕೃಷ್ಣನ್** ಅವರ ತಿಳಿಸಿರುವರು.

ಭಾರತದಲ್ಲಿ ಜನಿಸಿದ ವ್ಯಕ್ತಿ ಹಿಂದೂ, ಜೈನ, ಮುಸ್ಲಿಂ, ಕ್ರೈಸ್ತ ,ಮುಂತಾದ ಪ್ರಮುಖ ಧರ್ಮಗಳಲ್ಲಿ ಯಾವುದೇ ಒಂದು ಧರ್ಮಕ್ಕೆ ಸಂಬಂಧಪಟ್ಟ ನಾಗಿರುತ್ತಾನೆ . ಆತನು ತೊಟ್ಟಿಲಿನಿಂದ ಮರಣದವರೆಗೆ ತನ್ನದೇ ಆದ ಧರ್ಮದ ಚೌಕಟ್ಟಿನಲ್ಲಿಯೇ, ವಿವಿಧ ಸಂಸ್ಕಾರಗಳು, ವಿಧಿ - ವಿಧಾನಗಳಿಗೆ ತಕ್ಕಂತೆ ಹೊಂದಿಕೊಂಡಿರಬೇಕಾಗುತ್ತದೆ. ಧರ್ಮದ ಏಕತೆಯೇ ನಮ್ಮ ಸಾಂಸ್ಕೃತಿಕ ಶ್ರೀಮಂತಿಕೆಯ ಬುನಾದಿ. ಪ್ರಾಚೀನ ಭಾರತೀಯ ಸಂಸ್ಕೃತಿಯು , ಸಿಂಧೂ ನಾಗರಿಕತೆ ಯನ್ನು ಹೊಂದಿ, ರೋಂ ಮತ್ತು ಗ್ರೀಸ್ ದೇಶಗಳ ಪರಂಪರೆಗೂ ಮೀರಿ ನಿಂತಿದೆ. ಋಷಿಮುನಿಗಳು, ಸಂತರು ,ತತ್ವಜ್ಞಾನಿಗಳು, ಚಿಂತಕರು, ಧರ್ಮದ ಪ್ರತಿಮೂರ್ತಿಗಳಾಗಿದ್ದಾರೆ. ಬಹುಸಂಖ್ಯಾತ ಭಾರತೀಯರು ಹಿಂದೂ ಧರ್ಮದ ಅನುಯಾಯಿಗಳಾಗಿರುವುದು, ಸಮೀಕ್ಷೆಯ ಆಧಾರದಿಂದ ತಿಳಿದು ಬರುತ್ತದೆ. ಹಿಂದೂ ಧರ್ಮದ ವೈಶಿಷ್ಟವೆಂದರೆ - ಹಿಂದೂ ಧರ್ಮವನ್ನು ಸನಾತನ ಧರ್ಮ, ವೈದಿಕ ಧರ್ಮ, ಆರ್ಯ ಧರ್ಮ, ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ಹಿಂದೂಧರ್ಮವು ಆಚರಣೆಗಿಂತಲೂ ವ್ಯಕ್ತಿಯ ನೈತಿಕ ವರ್ತನೆಗಳಿಗೆ ಹೆಚ್ಚಿನ ಮಹತ್ವ ನೀಡುತ್ತದೆ. ಹಿಂದೂ ಧರ್ಮಕ್ಕೆ ಯಾವುದೇ ಸಂಸ್ಥಾಪಕನಿಲ್ಲ. ಹಲವಾರು ಋಷಿಮುನಿಗಳು ಕಾಲಾನುಕ್ರಮದಲ್ಲಿ ತಮ್ಮ ದಿವ್ಯಾನುಭವಗಳಿಂದ ಕಂಡುಕೊಂಡ ಸತ್ಯದ ಸಾರ ಸಂಗ್ರಹವೇ ಹಿಂದು ಧರ್ಮ ಹೀಗಾಗಿ ಇಲ್ಲಿ ಯಾವಾಗಲೂ ವಿಚಾರ ಮಂಥನಕ್ಕೆ ಜಿಜ್ಞಾಸೆಗೆ, ಸಂಶೋಧನೆಗೆ, ಸಂಶಯ ನಿವಾರಣೆಗೆ ಮುಕ್ತ ಅವಕಾಶವಿದೆ. ಆದ್ದರಿಂದಲೇ ಹಿಂದೂಧರ್ಮ ಇಂದಿಗೂ ಸತ್ವಯುತವಾಗಿ ಉಳಿದಿದೆ ಮತ್ತು ಬೆಳೆದಿದೆ.

### III. ಸಮನ್ವಯತೆ ಸಹಿಷ್ಣುತೆ.

ನಮ್ಮ ಭಾರತೀಯ ಸಮಾಜದ ವಿವಿಧತೆಯಲ್ಲಿ ಏಕತೆಯನ್ನು ಕಾಣಲು ಸಹಿಷ್ಣುತೆ ಮತ್ತು ಹೊಂದಾಣಿಕೆಗಳೆ ಆಧಾರವಾಗಿವೆ. ಹಿಂದೂ ಧರ್ಮವು ಸರ್ವಧರ್ಮ ಸಹಿಷ್ಣುತೆಯ ಗುಣವನ್ನು ಹೊಂದಿರುವುದರಿಂದ "**ಆ ನೋ ಭದ್ರಾಃ ಕೃತವ್ಯೋ ಯಂತು ವಿಶ್ವತಃ**" ಎನ್ನುವಂತೆ ಉದಾತ್ತ ಚಿಂತನೆಗಳು ಯಾವುದೇ ಮೂಲದಿಂದ ಬಂದಿದ್ದರೂ ಸ್ವೀಕರಿಸುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು.

ಸರ್ವಧರ್ಮಾಭಿಮಾನ, ಪರಧರ್ಮ ಸಹಿಷ್ಣುತೆ ಇದು ಭಾರತೀಯ ಪರಂಪರೆಯ ಜೀವಂತ ಲಕ್ಷಣವಾಗಿದೆ. "***ದೇವನೊಬ್ಬ ನಾಮ ಹಲವು, ಭಕ್ತರೆನಿತೂ ಜಗದಲಿ, ಭಾಷೆ ಹಲವು ಭಾವವೊಂದೇ ಜಗಳವಿಲ್ಲ ನಮ್ಮಲ್ಲಿ***" ಎಂಬ ಕವಿವಾಣಿಯಂತೆ ನಮ್ಮದೇಶದಲ್ಲಿ ಹಲವಾರು ಭಾಷೆ, ಜಾತಿ, ಮತ, ಪಂಥಗಳ ಜನರು ಭಾರತೀಯ ಸಂಸ್ಕೃತಿಯಲ್ಲಿ ಸಮನ್ವಯ ಭಾವದಿಂದ ಬದುಕುತ್ತಿದ್ದಾರೆ. ಒಳ್ಳೆಯದು ಯಾವ ಮೂಲೆಯಿಂದಲೂ ಬಂದರೂ ಅದನ್ನು ಭಾರತೀಯ ಸಂಸ್ಕೃತಿಯ ಅಳವಡಿಸಿಕೊಂಡು . ವ್ಯಾಪಕವಾಗಿ, ಶ್ರೀಮಂತವಾಗಿ ಬೆಳೆದಿದೆ. ನಮ್ಮನ್ನು ಸೋಲಿಸಿ ಪ್ರಭುತ್ವ ಸಾಧಿಸಬೇಕೆಂಬ ಛಲದಿಂದ ಅನೇಕ ವಿದೇಶಿಯರು ನಮ್ಮ ದೇಶಕ್ಕೆ ಬಂದರೂ, ಅವರೆಲ್ಲರಿಗೂ ಆಶ್ರಯ ನೀಡಿ, ಅವರನ್ನು ಅಪ್ಪಿಕೊಂಡು ಹಿರಿಮೆಯಿಂದ ಮೆರೆಯುತ್ತಿರುವುದು ನಮ್ಮ ಭಾರತೀಯ ಸಂಸ್ಕೃತಿ.

ಭಾರತೀಯರಲ್ಲಿ ಅಪಾರವಾದ ಸಹಿಷ್ಣುತೆ ಗುಣವಿದೆ. ಎಲ್ಲಾ ಧರ್ಮ ಸಂಸ್ಕೃತಿಯ ಆಚಾರ-ವಿಚಾರ, ಭಾಷೆಗಳು, ಇತರ ಅಂಶಗಳ ಬಗ್ಗೆಯೂ ಅಪಾರವಾದ ಗೌರವವಿದೆ. ಭಾರತೀಯರು ಸಹನಶೀಲರು, ಸಮರಸವೇ ಜೀವನ ಎಂದು ನಂಬಿದವರು, ಧರ್ಮ, ಸಂಸ್ಕೃತಿಯಲ್ಲಿ ಬರೆತುಕೊಂಡು, ಮುಸ್ಲಿಂ ಹಾಗೂ ಬ್ರಿಟಿಷ್ ಆಡಳಿತಾವಧಿಯಲ್ಲಿ ಅವರನ್ನು ಸಹ ಅಣ್ಣ - ತಮ್ಮಂದಿರಂತೆ ಪ್ರೀತಿಸಿ, ಅವರ ಧರ್ಮ, ಭಾಷೆ, ನಮ್ಮಲ್ಲಿ ಬೆಳೆಯಲಿಕ್ಕೆ ಅವಕಾಶ ಮಾಡಿಕೊಟ್ಟರು. ಭಾರತೀಯರು ತಾವು ಬಾಳಿ ಇತರರನ್ನು ಬಾಳಲು ಅವಕಾಶ ಮಾಡಿಕೊಡುವ ಜನರು. ಪರಕೀಯ ಧರ್ಮ ಮತ್ತು ಸಂಸ್ಕೃತಿಯ ಅಂಶಗಳನ್ನು ಸ್ವೀಕರಿಸಿದರೂ ತಮ್ಮ ಮೂಲ ಧರ್ಮ, ಸಂಸ್ಕೃತಿಯನ್ನು ಉಳಿಸಿಕೊಂಡು ಬಂದವರು. ಒಂದೆಡೆ **ಹುಮಾಯುನ್ ಕಬೀರರು** ಅವರು " **ಇಂದು ಭಾರತೀಯರೆನಿಸುವ ಪ್ರತಿಯೊಂದು ಸಂಗತಿಯು, ಅದು ಒಂದು ಭಾವನೆಯೆ ಆಗಿರಲಿ, ಒಂದು ಶಬ್ದ, ಒಂದು ಕಲೆಯ ರೂಪ, ಒಂದು ರಾಜಕೀಯ ಸಂಸ್ಥೆ ,ಅಥವಾ ಒಂದು ಸಾಮಾಜಿಕ ರೋಢಿಯೆ ಆಗಿರಲಿ, ಅದು ವಿವಿಧ ಮೂಲ ಕಲಾಪಗಳ ಸಂಕಿರಣ**" ಎಂದು ಅಭಿಪ್ರಾಯಪಟ್ಟಿದ್ದಾರೆ ಭಾರತೀಯ ಸ್ತ್ರೀಯರ ಸ್ವಭಾವ ವರ್ಣಿಸುವಾಗ ಸಹನಾ ಮೂರ್ತಿಗಳೆಂದು ಹೇಳಿದ್ದಾರೆ.

### Iv. ನಿಸರ್ಗದೊಡನೆ ಸಾಮರಸ್ಯ

ಭಾರತೀಯ ಹಿಂದೂ ಸಂಸ್ಕೃತಿಯ ಭೌತಿಕ ವಂಶಗಳು ನಿಸರ್ಗಕ್ಕೆ ಸಂಬಂಧಿಸಿದ್ದಾಗಿವೆ. ಭಾರತೀಯರು ಪ್ರಕೃತಿ ಪ್ರಿಯರು. ನಿಸರ್ಗ ಆರಾಧಕರು, ನದಿ, ಬೆಟ್ಟ, ಗುಡ್ಡ, ಕಾಡು, ಗಿಡ-ಮರಗಳು, ಮತ್ತು ಪ್ರಾಣಿ, ಪಶುಗಳಲ್ಲಿಯು ಪೂಜ್ಯ ಭಾವನೆಯನ್ನು ಕಾಣುವುದು ನಮ್ಮ ಧರ್ಮ, ಸಂಸ್ಕೃತಿಯಲ್ಲಿ ಅಡಗಿರುವುದು. ಅಂದರೆ ಭೂಮಿಯನ್ನು - ಭೂಮಾತೆಯೆಂದು, ಆಕಳನ್ನು - ಗೋಮಾತೆಯೆಂದು, ದವಸಧಾನ್ಯಗಳನ್ನು ಲಕ್ಷ್ಮಿಯೆಂದು, ನೀರನ್ನು ಗಂಗೆ ಎಂದು, ತುಳಸಿ ಗಿಡ, ದನಕರುಗಳು, ಅಗ್ನಿ ,ವರುಣ, ಮುಂತಾದವುಗಳನ್ನು ಆರಾಧನೆ ಮಾಡುವ ಶ್ರದ್ಧೆಯ ಕಲ್ಪನೆ ಹೊತ್ತು ಮೆರೆಯುತ್ತಿದೆ ನಮ್ಮ ಸಂಸ್ಕೃತಿ. ಇದರ ಜೊತೆಗೆ ಅಮರನಾಥ್, ಕೇದಾರನಾಥ್, ಬದ್ರಿನಾಥ್, ತಿರುಪತಿ, ಮುಂತಾದ ಕ್ಷೇತ್ರಗಳಲ್ಲಿಯೂ ಅನನ್ಯ ಭಕ್ತಿಯಿಂದ ದರ್ಶನ ಪಡೆಯುವುದನ್ನು ಕಾಣುವೆವು ನಾವು.

**V. ಕರ್ಮ ಸಿದ್ಧಾಂತದ ಸಮರ್ಥನೆ**

ಸಮಾಜದಲ್ಲಿ ಕಂಡುಬರುವ ದೈಹಿಕ, ಮಾನಸಿಕ, ಸಾಮಾಜಿಕ ವೈವಿಧ್ಯತೆಗಳು, ಮತ್ತು ಬಾಳಿನ ಸುಖ-ದುಃಖ, ಜೀವನದಲ್ಲಿ ಬರುವ ಏರುಪೇರುಗಳ ಮೂಲ ಕಾರಣ ಕರ್ಮವೆಂದು ಭಾರತೀಯರು ಬಲವಾಗಿ ನಂಬಿರುವರು. ಸಾಮಾನ್ಯವಾಗಿ **ಕರ್ಮ ಎಂದರೆ ಕಾಯಕ ಕಾರ್ಯ ಕೆಲಸ** ಮುಂತಾದ ಅರ್ಥಗಳಿಂದ ಕರೆಯಲಾಗುತ್ತದೆ. ಜಗತ್ತಿನಲ್ಲಿ ಜನ್ಮತಾಳಿದ ಪ್ರತಿಯೊಬ್ಬ ವ್ಯಕ್ತಿಯೂ, ತನಗೆ ನಿರ್ವಹಿಸಿ ಕೊಟ್ಟಿರುವ ಕಾರ್ಯವನ್ನು ಶ್ರದ್ಧೆಯಿಂದ ಮಾಡಿ, ಅದರ ಮೂಲಕವೇ ಮುಕ್ತಿಯನ್ನು ಪಡೆಯಬೇಕೆಂಬುದೇ ಕರ್ಮಸಿದ್ಧಾಂತದ ಮೂಲ ತತ್ವವಾಗಿದೆ. ಹಿಂದಿನ ಜನ್ಮದಲ್ಲಿ ಮಾಡಿರುವ ಕರ್ಮವೂ, ಈ ಜನ್ಮದ ಸ್ಥಿತಿಗತಿಗಳಿಗೆ ಕಾರಣವಾಗಿರುವುದು. ಅಲ್ಲದೆ ಈಗಿನ ಕರ್ಮವು ಮುಂದಿನ ಜನ್ಮದ ಸ್ಥಿತಿಗತಿಗೆ ಕಾರಣವಾಗಿರುವುದು, ಎಂದು ನಂಬಿರುವರು.

ಕರ್ಮಸಿದ್ಧಾಂತದ ಬೆನ್ನೆಲುಬಾಗಿ ಪಾಪಪುಣ್ಯಗಳು ಬೆಳೆದು ಬಂದಿರುತ್ತವೆ. ಕಾಯಕದಲ್ಲಿ ಅಥವಾ ಮಾಡುವ ಕಾರ್ಯದಲ್ಲಿ ಯಾವುದೇ ಮೋಸ ವಂಚನೆಗಳ ಇರಬಾರದು, ಮೇಲು-ಕೀಳು ಉಚ್ಚ-ನೀಚ ಎಂಬ ತಾರತಮ್ಯ ಇರಬಾರದು, ಆದರೆ ಅದನ್ನು ಮಾಡುವ ವಿಧಾನದಲ್ಲಿ ಮಾತ್ರ ಒಳಿತು-ಕೆಡುಕುಗಳು ಅಡಕವಾಗಿರುತ್ತವೆ. ಯಾವ ಕಾರ್ಯವೂ ಶ್ರದ್ಧೆಯಿಲ್ಲದೆ ಕೇವಲ ವಂಚನೆಯಿಂದ ಮಾಡುವ ಕಾರ್ಯ ಮೇಲ್ದರ್ಜೆಯಾಗಿದ್ದರು, ಸಹಿತ ಅದು ಪವಿತ್ರವಾಗಿರುತ್ತದೆ. ಮತ್ತು ಶ್ರದ್ಧೆಯಿಂದ ಪ್ರಾಮಾಣಿಕವಾಗಿ ಮಾಡುವ ಕಾರ್ಯ, ಕೆಳಮಟ್ಟದ್ದಾಗಿದ್ದರೂ ಸಹಿತ ಅದು ಪವಿತ್ರವಾದುದು. ಬಸವಣ್ಣನವರು ಇದನ್ನೇ ಕಾಯಕವೇ ಕೈಲಾಸ ಎಂದು ಹೇಳಿರುವರು.

**VI . ಸದ್ಗತಿ - ಮುಕ್ತಿ, ಮೋಕ್ಷ**

ಭಾರತೀಯ ಸಮಾಜದಲ್ಲಿರುವ ಪರಂಪರೆಯ ಮತ್ತೊಂದು ಸಾಮಾನ್ಯ ಲಕ್ಷಣವೆಂದರೆ ಸದ್ಗತಿ ಅಥವಾ ಮುಕ್ತಿ ಹೊಂದುವುದಾಗಿದೆ. ಪ್ರತಿಯೊಬ್ಬ ಭಾರತೀಯನ ಬದುಕಿನ ಸರ್ವೋತ್ಕೃಷ್ಟ ಗುರಿಯೇ ಮೋಕ್ಷ ಸಾಧನೆಯಾಗಿದೆ. ಅಂದರೆ ಜೀವಾತ್ಮವು ಪರಮಾತ್ಮನೊಂದಿಗೆ ಸಾಮರಸ್ಯ ಹೊಂದುವ, ಈ ಹಂತವನ್ನು ವಿವಿಧ ಧರ್ಮಗಳಲ್ಲಿ, ವಿಭಿನ್ನ ರೀತಿಯಿಂದ ವಿವರಿಸಲಪಟ್ಟಿದ್ದರೂ ಸಹಿತ ಅಂತಿಮ ತತ್ವ ಅಥವಾ ಸಂದೇಶ ಮಾತ್ರ ಒಂದೇ ಆಗಿದೆ. ಸದ್ಗತಿ ಮೋಕ್ಷ ಅಥವಾ ಮುಕ್ತಿಯನ್ನು ಹುಟ್ಟು-ಸಾವುಗಳ ಬಂಧನದಿಂದ ಶಾಶ್ವತವಾಗಿ ಬಿಡುಗಡೆ ಮಾಡಿ, ಸಂಸಾರ ಬಂಧನದಿಂದ ಹೊರಬಂದು ಶಾಶ್ವತ ಆನಂದವನ್ನು ಪಡೆಯುವುದು. ತನ್ನನ್ನು ತಾನು ಅರಿತುಕೊಳ್ಳುವುದು. ಅಥವಾ ಆತ್ಮಸಾಕ್ಷಾತ್ಕಾರವನ್ನು ಮಾಡಿಕೊಳ್ಳುವುದು. ಹೇಗೆ ಮುಂತಾದ ವಿಧಾನಗಳಿಂದ ಹಿಂದೂ ಧರ್ಮದಲ್ಲಿ ವಿವರಿಸಲಾಗುತ್ತದೆ .

ಇಸ್ಲಾಂ ಧರ್ಮಗಳಲ್ಲಿ ಇಹಲೋಕ ಯಾತ್ರೆಯನ್ನು ಮುಗಿಸಿದ ವ್ಯಕ್ತಿಯ ದೇಹ ಗೋರಿಯಲ್ಲಿ **ಮುನಶೇರ್** ಮತ್ತು **ನಸೀರ್** ಎಂಬ ದೇವದೂತರನ್ನು ಸಂದರ್ಶಿಸ ಬೇಕಾಗುತ್ತದೆ. ಅಲ್ಲಿ ಧರ್ಮ ಮತ್ತು ನೀತಿಯ ಬಗ್ಗೆ ವೃತ್ತ ದೇಹಿಗೆ ವಿವಿಧ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಸದ್ಗತಿ ಅಥವಾ ಪುನರುತ್ಥಾನದ ದಿವಸ ಮೃತ ವ್ಯಕ್ತಿಯ ಪಾಪ-ಪುಣ್ಯಗಳನ್ನು ಪರಾಮರ್ಶಿಸಿ ತೀರ್ಪು ನೀಡಲಾಗುವುದು. **ಸಿರಾಖ್ ಸೇತುವೆ ( ಸ್ವರ್ಗ)** ವನ್ನು ದಾಟಲು ಪುಣ್ಯ ಜೀವಿಗಳಿಗೆ ಮಾತ್ರ ಆಸ್ಪದ ನೀಡಲಾಗುತ್ತದೆ. ಪಾಪಿಗಳನ್ನು ನೇರವಾಗಿ ನರಕಕ್ಕೆ ತಳ್ಳಲಾಗುತ್ತದೆ. ಹೀಗೆ ಇಸ್ಲಾಂ ಧರ್ಮೀಯರಿಗೆ ಪುನರುತ್ಥಾನದ ದಿವಸ ಸ್ವರ್ಗ ನರಕಗಳ ತೀರ್ಪಿನ ದಿವಸದಂತಿರುತ್ತದೆ.

ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತದ ಪ್ರಕಾರ ಮಲತ್ರಯಾದಿಗಳಿಂದ ಒಡಗೂಡಿದ ಜೀವನದ ಕೊನೆಗೆ ಸಾಧನೆಯ ಮೂಲಕ ಶಿವಸ್ವರೂಪವನ್ನು ಪಡೆದು ಶಿವನಲ್ಲಿ ಐಕ್ಯನಾಗಿಬಿಡುತ್ತಾನೆ. ಲಿಂಗ - ಅಂಗ ಸಾಮರಸ್ಯವೇ ಮೋಕ್ಷವೆಂದು ವೀರಶೈವರು ನಂಬಿರುತ್ತಾರೆ. ಈ ರೀತಿ ಭಕ್ತಿ - ಜ್ಞಾನ - ಕ್ರಿಯೆಗಳ ಗಳೊಂದಿಗೆ ಕೂಡಿದ ಶಿವಯೋಗದ ಮೂಲಕ ಜೀವನದಲ್ಲಿ ಶಿವಕ್ಯನಾಗಲು ಸಾಧ್ಯವಾಗುವುದು.

ಒಟ್ಟಿನಲ್ಲಿ ಮೋಕ್ಷಸಾಧನೆ ಬಗ್ಗೆ ವಿವಿಧ ಸಿದ್ಧಾಂತಗಳು ಕಂಡುಬಂದರೂ ಸಹಿತ ಅಂತಮ ಅಂತಿಮ ಗುರಿಯು ಮಾತ್ರ ಹುಟ್ಟು-ಸಾವುಗಳ ಬಂಧನದಿಂದ ಬಿಡುಗಡೆ ಹೊಂದಿ ಶಾಶ್ವತ ಆನಂದವನ್ನು ಪಡೆಯುವುದಾಗಿದೆ.

***ಪ್ರೊ. ಎಸ್. ಆರ್. ಕಲ್ಯಾಣಶೆಟ್ಟಿ.***
***ಸಮಾಜಶಾಸ್ತ್ರ ವಿಭಾಗ***
***ಎಸ್.ವ್ಹಿ. ಎಮ್. ಕಲೆ ಹಾಗೂ ವಾಣಿಜ್ಯ ಮಹಿಳಾ***
***ಮಹಾವಿದ್ಯಾಲಯ, ಇಲಕಲ್ಲ.***

26 May 2021, 3:43 PM